CAREERINDIA

**Signature and Name of Invigilator**

1. (Signature) ______________________

   (Name) ______________________

2. (Signature) ______________________

   (Name) ______________________

**OMR Sheet No. :** ...............................................
(To be filled by the Candidate)

**Roll No.** | | | | | | | | |
(In figures as per admission card)

**Roll No.** ______________________
(In words)

**J 2 1 1 5**

# PAPER - II
# KANNADA

**Time : 1¼ hours]** **[Maximum Marks : 100**

Number of Pages in this Booklet : **12** Number of Questions in this Booklet : **50**

## Instructions for the Candidates

1. Write your roll number in the space provided on the top of this page.
2. This paper consists of fifty multiple-choice type of questions.
3. At the commencement of examination, the question booklet will be given to you. In the first 5 minutes, you are requested to open the booklet and compulsorily examine it as below :
   (i) To have access to the Question Booklet, tear off the paper seal on the edge of this cover page. Do not accept a booklet without sticker-seal and do not accept an open booklet.
   (ii) **Tally the number of pages and number of questions in the booklet with the information printed on the cover page. Faulty booklets due to pages/questions missing or duplicate or not in serial order or any other discrepancy should be got replaced immediately by a correct booklet from the invigilator within the period of 5 minutes. Afterwards, neither the Question Booklet will be replaced nor any extra time will be given.**
   (iii) After this verification is over, the Test Booklet Number should be entered on the OMR Sheet and the OMR Sheet Number should be entered on this Test Booklet.
4. Each item has four alternative responses marked (1), (2), (3) and (4). You have to darken the circle as indicated below on the correct response against each item.
   **Example :** ① ② ● ④ where (3) is the correct response.
5. Your responses to the items are to be indicated in the **OMR Sheet given inside the Booklet only.** If you mark your response at any place other than in the circle in the OMR Sheet, it will not be evaluated.
6. Read instructions given inside carefully.
7. Rough Work is to be done in the end of this booklet.
8. If you write your Name, Roll Number, Phone Number or put any mark on any part of the OMR Sheet, except for the space allotted for the relevant entries, which may disclose your identity, or use abusive language or employ any other unfair means, such as change of response by scratching or using white fluid, you will render yourself liable to disqualification.
9. You have to return the original OMR Sheet to the invigilators at the end of the examination compulsorily and must not carry it with you outside the Examination Hall. You are however, allowed to carry original question booklet and duplicate copy of OMR Sheet on conclusion of examination.
10. **Use only Blue/Black Ball point pen.**
11. **Use of any calculator or log table etc., is prohibited.**
12. **There are no negative marks for incorrect answers.**

## परीक्षार्थियों के लिए निर्देश

1. इस पृष्ठ के ऊपर नियत स्थान पर अपना रोल नम्बर लिखिए।
2. इस प्रश्न-पत्र में पचास बहुविकल्पीय प्रश्न हैं।
3. परीक्षा प्रारम्भ होने पर, प्रश्न-पुस्तिका आपको दे दी जायेगी। पहले पाँच मिनट आपको प्रश्न-पुस्तिका खोलने तथा उसकी निम्नलिखित जाँच के लिए दिये जायेंगे, जिसकी जाँच आपको अवश्य करनी है :
   (i) प्रश्न-पुस्तिका खोलने के लिए पुस्तिका पर लगी कागज की सील को फाड़ लें। खुली हुई या बिना स्टीकर-सील की पुस्तिका स्वीकार न करें।
   (ii) **कवर पृष्ठ पर छपे निर्देशानुसार प्रश्न-पुस्तिका के पृष्ठ तथा प्रश्नों की संख्या को अच्छी तरह चैक कर लें कि ये पूरे हैं। दोषपूर्ण पुस्तिका जिनमें पृष्ठ/प्रश्न कम हों या दुबारा आ गये हों या सीरियल में न हों अर्थात किसी भी प्रकार की त्रुटिपूर्ण पुस्तिका स्वीकार न करें तथा उसी समय उसे लौटाकर उसके स्थान पर दूसरी सही प्रश्न-पुस्तिका ले लें। इसके लिए आपको पाँच मिनट दिये जायेंगे। उसके बाद न तो आपकी प्रश्न-पुस्तिका वापस ली जायेगी और न ही आपको अतिरिक्त समय दिया जायेगा।**
   (iii) इस जाँच के बाद प्रश्न-पुस्तिका का नंबर OMR पत्रक पर अंकित करें और OMR पत्रक का नंबर इस प्रश्न-पुस्तिका पर अंकित कर दें।
4. प्रत्येक प्रश्न के लिए चार उत्तर विकल्प (1), (2), (3) तथा (4) दिये गये हैं। आपको सही उत्तर के वृत्त को पेन से भरकर काला करना है जैसा कि नीचे दिखाया गया है।
   **उदाहरण :** ① ② ● ④ जबकि (3) सही उत्तर है।
5. प्रश्नों के उत्तर **केवल प्रश्न पुस्तिका के अन्दर दिये गये OMR पत्रक पर ही** अंकित करने हैं। यदि आप OMR पत्रक पर दिये गये वृत्त के अलावा किसी अन्य स्थान पर उत्तर चिन्हांकित करते हैं, तो उसका मूल्यांकन नहीं होगा।
6. अन्दर दिये गये निर्देशों को ध्यानपूर्वक पढ़ें।
7. कच्चा काम (Rough Work) इस पुस्तिका के अन्तिम पृष्ठ पर करें।
8. यदि आप OMR पत्रक पर नियत स्थान के अलावा अपना नाम, रोल नम्बर, फोन नम्बर या कोई भी ऐसा चिह्न जिससे आपकी पहचान हो सके, अंकित करते हैं अथवा अभद्र भाषा का प्रयोग करते हैं, या कोई अन्य अनुचित साधन का प्रयोग करते हैं, जैसे कि अंकित किये गये उत्तर को मिटाना या सफेद स्याही से बदलना तो परीक्षा के लिये अयोग्य घोषित किये जा सकते हैं।
9. आपको परीक्षा समाप्त होने पर मूल OMR पत्रक निरीक्षक महोदय को लौटाना आवश्यक है और परीक्षा समाप्ति के बाद उसे अपने साथ परीक्षा भवन से बाहर न लेकर जायें। हालांकि आप परीक्षा समाप्ति पर मूल प्रश्न-पुस्तिका तथा OMR पत्रक की डुप्लीकेट प्रति अपने साथ ले जा सकते हैं।
10. **केवल नीले/काले बाल प्वाईंट पेन का ही इस्तेमाल करें।**
11. **किसी भी प्रकार का संगणक (कैलकुलेटर) या लाग टेबल आदि का प्रयोग वर्जित है।**
12. **गलत उत्तरों के लिए कोई नकारात्मक अंक नहीं हैं।**

www.careerindia.com

CAREERINDIA

# KANNADA
## PAPER - II

**Note :** This paper contains **fifty (50)** objective type questions of **two (2)** marks each. **All** questions are **compulsory**.

**ಸೂಚನೆ :** ಈ ಪತ್ರಿಕೆಯಲ್ಲಿ ಬಹು ಆಯ್ಕೆಯ **ಐವತ್ತು (50)** ಪ್ರಶ್ನೆಗಳಿರುತ್ತವೆ. ಪ್ರತಿಯೊಂದು ಪ್ರಶ್ನೆಗೂ **ಎರಡು (2)** ಅಂಕಗಳು ಇರುತ್ತವೆ. **ಎಲ್ಲಾ** ಪ್ರಶ್ನೆಗಳನ್ನೂ ಉತ್ತರಿಸಿರಿ.

**ಏಕ ಆಯ್ಕೆಯ ಮಾದರಿಯ ಪ್ರಶ್ನೆಗಳು :**

1. 'ಕಾಮನಸಿತೋತ್ಪಲ ವರ್ಣ್ಣನವನ್' – ಈ ಮಾತು ಬರುವ ಶಾಸನ :
   (1) ಗಂಗಾಧರಂ ಶಾಸನ (2) ತಮಟಕಲ್ಲು ಶಾಸನ
   (3) ಹಲ್ಮಿಡಿ ಶಾಸನ (4) ಬಾದಾಮಿ ಶಾಸನ

2. 'ಸಮ್ಯಕ್ತ್ವ ರತ್ನಾಕರ' ಎಂದು ಕರೆಯಿಸಿಕೊಂಡವನು :
   (1) ಚಾವುಂಡರಾಯ (2) ಪೊನ್ನ (3) ನಯಸೇನ (4) ರತ್ನಾಕರವರ್ಣಿ

3. 'ಪಾಳಿ ನಿಲೆ ನೆಗಟೆ ಬಾಟ್ಟುದು ಬಾಟಿಂಬುದುನಿಕ್ಕುವಂ' – ಎಂದು ಹೇಳಿದವರು :
   (1) ಪಂಪ (2) ಶಿವಕೋಟ್ಯಾಚಾರ್ಯ (3) ಶ್ರೀವಿಜಯ (4) ರನ್ನ

4. 'ಗಗನ ಕೋಲಂಬಿನಲ್ಲಿ ಸ್ವಪ್ನದ ನಿಲವನು ತೆಗೆದೆಚ್ಚವನಾರೋ' – ಈ ವಚನದ ಸಾಲು ಇವರದು.
   (1) ಬಸವಣ್ಣ (2) ಅಕ್ಕಮಹಾದೇವಿ (3) ಸಿದ್ಧರಾಮ (4) ಅಲ್ಲಮಪ್ರಭು

5. ಕೋಳೂರು ಕೊಡಗೂಸಿನ ಕಥೆ ಬರುವ ಕಾವ್ಯ :
   (1) ಬಸವ ಪುರಾಣ (2) ಹದಿಬದೆಯ ಧರ್ಮ (3) ಆದಿಪುರಾಣ (4) ಗಿರಿಜಾ ಕಲ್ಯಾಣ

6. 'ದಾಸಿಯುಂಟಹಿಂಸೆಯೆಂಬ ದಾಸನುಂಟು' – ಈ ಸಾಲು ಬರೆದ ಕವಿ :
   (1) ಪುರಂದರದಾಸ (2) ಕನಕದಾಸ (3) ನಿಜಗುಣ ಶಿವಯೋಗಿ (4) ವಾದಿರಾಜ

7. 'ಕಮಲನಾಭನ ಕರುಣ ಕವಚವು ಸವೆದರಾರೇಗುವರು' – ಈ ಮಾತು ಇವರದು :
   (1) ಶ್ರೀಪಾದರಾಮ (2) ಕನಕದಾಸ (3) ಪುರಂದರದಾಸ (4) ಮಹೀಪತಿದಾಸ

8. ಇದು ಹರಿನಾರಾಯಣ ಆಪ್ಟೆಯವರ ಕೃತಿ :
   (1) ಉಷಃಕಾಲ (2) ಕಪಾಲಕುಂಡಲ (3) ಆನಂದಮಠ (4) ಕೆಂಪು ಮೀನು

www.careerindia.com

CAREERINDIA

9. ಇದು ಶಾಂತಿನಾಥ ದೇಸಾಯಿಯವರ ರಚನೆ :
   (1) ಸಿದ್ಧಾರ್ಥ (2) ಖೋಜರಾಜ (3) ಸೆರಗಿನ ಕೆಂಡ (4) ಮಂಜುಗಡ್ಡೆ

10. ಸ್ವಾತಂತ್ರ್ಯಕ್ಕಾಗಿ ಹೋರಾಡಿದ ವೀರರ ಕಥೆಯನ್ನು ಉಳ್ಳ ಕಾದಂಬರಿ :
   (1) ಮುಕ್ತಿ (2) ಕದಳಿ ಕರ್ಪೂರ (3) ಸ್ವಾಮಿ ಅಪರಂಪಾರ (4) ಕರ್ಮಯೋಗಿ

11. ಎಲ್ಲರೂ ಬಾಳುವೆಡೆ ನಮಗೆ ಸಾವೇ ?
   ಎಲ್ಲರೂ ನಲಿವಕಡೆ ನಮಗೆ ನೋವೇ ? – ಈ ಕವನದ ಸಾಲುಗಳನ್ನು ಬರೆದ ಕವಿ :
   (1) ಮಧುರಚೆನ್ನ (2) ಬಿ.ಎಂ. ಶ್ರೀಕಂಠಯ್ಯ
   (3) ಗೋವಿಂದ ಪೈ (4) ಪು.ತಿ.ನ.

12. 'ನವೋದಯ' ವಿಮರ್ಶಾ ಕೃತಿಯನ್ನು ರಚಿಸಿದವರು :
   (1) ಜಿ.ಎಸ್. ಶಿವರುದ್ರಪ್ಪ (2) ಕುರ್ತಕೋಟಿ
   (3) ಬೇಂದ್ರೆ (4) ಕುವೆಂಪು

13. ತಿರುಮಲಾರ್ಯನು ಬರೆದ ಲಕ್ಷಣ ಗ್ರಂಥ :
   (1) ಕಾವ್ಯ ಪ್ರಕಾಶ (2) ರಸ ರತ್ನಾಕರ
   (3) ಕಾವ್ಯಾವಲೋಕನ (4) ಅಪ್ರತಿಮ ವೀರ ಚರಿತ

14. 'ಇರೆ ಶಬ್ದಾರ್ಥಂಗಳ್ ತತ್ಪರತೆಯಿಂ, ಅದು ಕಾವ್ಯಂ' – ಈ ಲಕ್ಷಣ ವಾಕ್ಯವನ್ನು ಹೇಳಿದ ಲಾಕ್ಷಣಿಕ :
   (1) ಕವಿರಾಜಮಾರ್ಗಕಾರ (2) ಸಾಳ್ವ
   (3) ನಾಗವರ್ಮ II (4) ದಂಡಿ

15. 'ಕೆಥಾರ್ಸಿಸ್' ಪರಿಕಲ್ಪನೆಯ ಮೂಲ ಪ್ರೇರಣೆ :
   (1) ದೈವಶಾಸ್ತ್ರ (2) ವೈದ್ಯಶಾಸ್ತ್ರ ಪರಿಭಾಷೆ
   (3) ರಾಕ್ಷಸ ಮನೋವೃತ್ತಿ (4) ಸ್ತ್ರೀ ಬಗೆಗಿನ ಚಿಂತನೆ

16. ಹೊರೇಸನ ದೃಷ್ಟಿಯಲ್ಲಿ :
   (1) ಒಳ್ಳೆಯ ಕಾವ್ಯ ರಚನೆಗೆ ಕವಿಯ ವ್ಯಕ್ತಿತ್ವವೂ ಮುಖ್ಯ
   (2) ಒಳ್ಳೆಯ ಕಾವ್ಯ ರಚನೆಗೆ 'ನಿಸರ್ಗ'ವು ಬಹಳ ಮುಖ್ಯ
   (3) ಒಳ್ಳೆಯ ಕಾವ್ಯ ರಚನೆಗೆ 'ಭಕ್ತಿ' ಭಾವ ಮುಖ್ಯ
   (4) ಒಳ್ಳೆಯ ಕಾವ್ಯ ರಚನೆಗೆ ಕವಿಯ ಗುಣಗಳು ಮುಖ್ಯವಲ್ಲ

www.careerindia.com

CAREERINDIA

17. ಇದು 'ಶೂರಸೇನ ಚರಿತ್ರೆ'ಗೆ ಆಕರ ಗ್ರಂಥ :

(1) ಮ್ಯಾಕ್‌ಬೆತ್ (2) ಶೇಷರಾಮಾಯಣ

(3) ಒಥೆಲೊ (4) ನಾಗವರ್ಮನ ಕಾದಂಬರಿ

18. 'ರಾಘವಾಂಕನ ಹರಿಶ್ಚಂದ್ರ ಕಾವ್ಯಂ' ಕೃತಿಯ ಸಂಪಾದಕರಲ್ಲಿ ಒಬ್ಬರು :

(1) ಡಿ.ಎಲ್. ನರಸಿಂಹಾಚಾರ್ (2) ದೇವೀರಪ್ಪ ಎಚ್.

(3) ಕ.ವೆಂ. ರಾಘವಾಚಾರ್ (4) ಎನ್. ಬಸವಾರಾಧ್ಯ

19. 'ಶೂನ್ಯ ಸಂಪಾದನೆಯ ಪರಾಮರ್ಶೆ' – ಈ ಸಂಶೋಧನ ಕೃತಿಯ ಕರ್ತೃ :

(1) ಎಂ.ಎಂ. ಕಲಬುರ್ಗಿ (2) ಎಸ್.ಎಸ್. ಭೂಸನೂರಮಠ

(3) ಎಲ್. ಬಸವರಾಜು (4) ಎಂ. ಚಿದಾನಂದಮೂರ್ತಿ

20. ಇದು ಅರ್ಥಸಂಕೋಚಕ್ಕೆ ಉದಾಹರಣೆ :

(1) ಕುಪ್ಪಸ (2) ಕೂಡಲಸಂಗಮ (3) ಎಣ್ಣೆ (4) ಓಲೆ

**ಬಹು ಆಯ್ಕೆಯ ಮಾದರಿಯ ಪ್ರಶ್ನೆಗಳು :**

21. ಇವು ಕನ್ನಡದ ಚಂಪೂ ಕೃತಿಗಳು :

(I) ಶಬರಶಂಕರ ವಿಳಾಸ ಮತ್ತು ಮಲ್ಲಿನಾಥಪುರಾಣ

(II) ಗಿರಿಜಾ ಕಲ್ಯಾಣ ಮತ್ತು ನೇಮಿನಾಥಪುರಾಣ

(III) ಆದಿಪುರಾಣ ಮತ್ತು ಯಶೋಧರ ಚರಿತೆ

(IV) ಗಧಾಯುದ್ಧ ಮತ್ತು ನಳ ಚರಿತ್ರೆ

(1) (I) ಮತ್ತು (III) (2) (II) ಮತ್ತು (III) (3) (I) ಮತ್ತು (II) (4) (II) ಮತ್ತು (IV)

22. ಕೃಷ್ಣನನ್ನು ವಸ್ತುವಾಗಿಟ್ಟು ಕೃತಿ ರಚನೆ ಮಾಡಿದವರು :

(I) ರುದ್ರಭಟ್ಟ (II) ಚಾಟುವಿಠಲನಾಥ

(III) ದುರ್ಗಸಿಂಹ (IV) ಕುಮಾರ ವಾಲ್ಮೀಕಿ

(1) (I) ಮತ್ತು (III) (2) (II) ಮತ್ತು (IV) (3) (II) ಮತ್ತು (III) (4) (I) ಮತ್ತು (II)

23. ಇವು ವಿಧವಾ ಸಮಸ್ಯೆಯನ್ನು ಆಧರಿಸಿದ ಕೃತಿಗಳು :

(I) ವಾಣಿಯ ಸಮಸ್ಯೆ (II) ಘಟಶ್ರಾದ್ಧ

(III) ಆಹುತಿ (IV) ಕೊನೆಯದಾರಿ

(1) (I) ಮತ್ತು (IV) (2) (I) ಮತ್ತು (III) (3) (I) ಮತ್ತು (II) (4) (II) ಮತ್ತು (IV)

www.careerindia.com

CAREERINDIA

24. ಇವು ಅನುವಾದಿತ ಕೃತಿಗಳು :
(I) ಉದಯರಾಗ ಮತ್ತು ಮುಕ್ತಿ
(II) ನೌಕಾಘಾತ ಮತ್ತು ಮನೆ ಜಗತ್ತು
(III) ಮೂಜನ್ಮ ಮತ್ತು ವಂಶವೃಕ್ಷ
(IV) ಮೃಣಾಲಿನಿ ಮತ್ತು ಕಮಲಕುಮಾರಿ
(1) (II) ಮತ್ತು (III) (2) (II) ಮತ್ತು (IV) (3) (I) ಮತ್ತು (II) (4) (III) ಮತ್ತು (IV)

25. ಇವು ಕಾವ್ಯಲಕ್ಷಣ ಗ್ರಂಥಗಳು :
(I) ಕಾವ್ಯಾದರ್ಶ
(II) ಛಂದೋಂಬುಧಿ
(III) ರಸಗಂಗಾಧರ
(IV) ಶಬ್ದಮಣಿದರ್ಪಣ
(1) (I) ಮತ್ತು (III) (2) (I) ಮತ್ತು (IV) (3) (I) ಮತ್ತು (II) (4) (II) ಮತ್ತು (III)

26. ಇವರು ಆಧುನಿಕೋತ್ತರ ವಿಮರ್ಶೆಯ ಪ್ರಮುಖ ಚಿಂತಕರು :
(I) ಕೇಟ್ ಮಿಲೆಟ್ (II) ಎಡ್ವರ್ಡ್ ಸೈದ್
(III) ರೇಮಂಡ್ ವಿಲಿಯ್ಸಂ (IV) ಎಫ್.ಆರ್. ಲೀವೀಸ್
(1) (I) ಮತ್ತು (IV) (2) (II) ಮತ್ತು (III) (3) (I) ಮತ್ತು (II) (4) (II) ಮತ್ತು (IV)

27. ಪಾಶ್ಚಾತ್ಯ ವಿಮರ್ಶಾ ಗ್ರಂಥಗಳನ್ನು ಕನ್ನಡಕ್ಕೆ ಅನುವಾದಿಸಿದವರು :
(I) ವಿ.ಎಂ. ಇನಾಂದಾರ್
(II) ಸಿ.ಪಿ. ಕೃಷ್ಣಕುಮಾರ್
(III) ಯು.ಆರ್. ಅನಂತಮೂರ್ತಿ
(IV) ರಾಮಚಂದ್ರ ಶರ್ಮ
(1) (II) ಮತ್ತು (IV) (2) (II) ಮತ್ತು (III) (3) (I) ಮತ್ತು (III) (4) (I) ಮತ್ತು (II)

28. ಇವು ಅರ್ಥಾಂತರಕ್ಕೆ ಉದಾಹರಣೆಗಳು :
(I) ಅಮ್ಮ (II) ಹೊನ್ನು (III) ಅವಸರ (IV) ಓಲೆ
(1) (I) ಮತ್ತು (II) (2) (I) ಮತ್ತು (III) (3) (II) ಮತ್ತು (IV) (4) (II) ಮತ್ತು (III)

www.careerindia.com

29. ಅನುಕ್ರಮವಾಗಿ ನವೋದಯ ಮತ್ತು ನವ್ಯ ಮನೋಧರ್ಮವನ್ನು ಪ್ರತಿನಿಧಿಸುವ ವಿಮರ್ಶಾ ಕೃತಿಗಳು :

(I) ದ್ರೌಪದಿಯ ಶ್ರೀಮುಡಿ; ಪ್ರಜ್ಞೆ ಮತ್ತು ಪರಿಸರ

(II) ಜೀವನ ಸೌಂದರ್ಯ ಮತ್ತು ಸಾಹಿತ್ಯ; ವಿಭೂತಿ ಪೂಜೆ

(III) ಕಾವ್ಯ ಕುತೂಹಲ; ನಿರಪೇಕ್ಷ

(IV) ಸಮಕಾಲೀನ; ಮಣ್ಣಿನ ವಾಸನೆ

(1) (I) ಮತ್ತು (III) (2) (I) ಮತ್ತು (IV) (3) (II) ಮತ್ತು (III) (4) (II) ಮತ್ತು (IV)

30. ಇವು ಪೋರ್ಚುಗೀಸ್ ಭಾಷೆಯಿಂದ ಸ್ವೀಕರಿಸಿದ ಪದಗಳು :

(I) ಪಾದ್ರಿ (II) ತೋಪು (III) ತಂಬಾಕು (IV) ಜವಾನ

(1) (II) ಮತ್ತು (IV) (2) (II) ಮತ್ತು (III) (3) (I) ಮತ್ತು (IV) (4) (I) ಮತ್ತು (III)

**ಲೇಖನ ಭಾಗ ಆಧಾರಿತ ಬಹು ಆಯ್ಕೆಯ ಮಾದರಿ :**

**ಈ ಕೆಳಗಿನ ಲೇಖನ ಭಾಗವನ್ನು ಓದಿ, ಅದನ್ನು ಆಧರಿಸಿದ ಪ್ರಶ್ನೆಗಳಿಗೆ ಉತ್ತರಿಸಿರಿ. ಸರಿಯಾದ ಉತ್ತರಗಳ ಸಂಜ್ಞೆಗಳನ್ನು ನಿಗದಿತ ಸ್ಥಳದಲ್ಲಿ ಗುರುತಿಸಿರಿ. (31 ನೇ ಪ್ರಶ್ನೆಯಿಂದ 35 ನೆಯ ಪ್ರಶ್ನೆಯವರೆಗೆ)**

ಜಂಬೂದ್ವೀಪದ ಭರತಕ್ಷೇತ್ರದೊಳವಂತಿಯೆಂಬುದು ನಾಡಲ್ಲಿ ಉಜ್ಜೇನಿಯೆಂಬುದು ಪೊಲದನಾಳ್ವೊಂ ಪ್ರದ್ಯೋತನೆಂಬನರಸನಾತನ ಮಹಾದೇವಿ ಜ್ಯೋತಿರ್ಮ್ಮಾಲೆಯೆಂಬೊಳಂತವರ್ಗ್ಗಳಿಷ್ಟ ವಿಷಯ ಕಾಮಭೋಗಂಗಳನನುಭವಿಸುತ್ತಂ ಕಾಲಂಸಲೆ ಮತ್ತೊಂದು ದಿವಸಮರಸಂ ಕಾಡಾನೆಯಂ ಪಿಡಿಯಲ್ವೇಡಿ ಸೊಕ್ಕಾನೆಯನೇಱೆಯಡವಿಗೆ ವೋದಡದು ಮದವಿಹ್ವಳಿತನಾಗಿ ಮೆಯ್ಯಱೆಯದೆ ದಿಶಾಪಟ್ಟಂಗೊಂಡೊಂದು ದೆಸೆಗೆ ಕೊಂಡೋಡಿ ದಂಡಕಾರಣ್ಯಮಪ್ಪಡವಿಯ ನಡುವೆ ತನ್ನ ಬೇಗದಿಂಪರಿಯೆ ನಾಡೆಯಂತರಂ ಪೋದೊಡೊಂದು ಮರದಡ್ಡಮಿರ್ದ್ದ ಕೊಂಬಂ ಕಂಡರಸಂ ಪಿಡಿದು ನೇಲ್ದಿರ್ದ್ದೊಡಾನೆಯುಂ ಪೆಱತೊಂದುದೆಸೆಗೆ ಪೋದೊಡತ್ತರಸನುಂ ಮರದಿಂದಿೞಿದು ನಾಡ ಬಟ್ಟೆಯೊಳ್ತಗುಳ್ದಡವಿಯಂ ಪೊಱಮಟ್ಟು ಬಂದೊಂದು ಖೇಡಮೆಂಬೂರನೆಯ್ದಿಯದಱ ಸಾಱೆಯೊಂದು ಕೈಯುಂಟದಱ ಸಾಱೆಯೊಂದು ಬಾವಿಯುಂಟದಱಡಿಯೊಳ್ ಕುಳ್ಳಿರ್ದ್ದು ಪಸಿವಿನಿಂದಂ ತೃಷೆಯಿಂದಂ ಪಥಶ್ರಮದಿಂ ದಾದಮಾನುಂ ಸೇದೆಗೆಟ್ಟು ಬಂಬಳಂ ಬಾಡಿರ್ಪ್ಪನ್ನೆಗಮಾವೂರ ಗಾವುಂಡಂ ಜಿನವಾದಿಕ ನೆಂಬೊನಾತನ ಗಾವುಂಡಿ ಜಿನಮತಿಯುಂಬೊಳಾ ಇರ್ವ್ವರ್ಗ್ಗಂ ಮಗಳ್ ಜಿನದತ್ತೆಯೆಂಬೊಳತ್ಯಂತ ರೂಪಲಾವಣ್ಯ ಸೌಭಾಗ್ಯಕಾಂತಿಯುಮಂದಿವನೊಡೆಯೊಳ್ ನೀರಂ ತರಲ್ಕೆಂದು ಬಾವಿಗೆ ಪೋದಾಕೆಯಂ ಕಂಡರಸಂ ಎಲೆ ಕೂಸೆ ನೀರಂ ಕುಡಿಯಲೆಱೆಯಾ ಎಂದೊಡಂತೆ ಗೆಯ್ವೆನೆಂದಾತನ ರೂಪುಂ ಗಾಡಿಯುಂ ತೇಜಮುಂ ಲಾವಣ್ಯ ಮುಮಂ ಕಂಡಾಟಿಸಿ ನೀರಂ ಸೇದಿಕೊಂಡು ಬಂದು ಕುಡಿಯಲೆಱೆಯೆ ಕುಡಿಯೆ ಕುಡಿಯೆ ಕರಗದ ದಾರೆಯನುಗಿದು ಕೊಂಡೊಡರಸನಾಕೆಯ ಮೊಗಮಂ ನೋಡಿ ನಕ್ಕೇಕೆ ಕಾಡುವೌ ಕೂಸೆ ಕಾಡದೆ ಕುಡಿಯಲೆಱೆಯಾ ಎಂದೊಡಾಕೆಯುಂ ಕುಡಿಯಲ್ಕೆಱೆದು ತನ್ನ ಮನೆಗೆ ವೋಗಿ ತನ್ನ ತಂದೆಗಿಂತೆಂದಳ್ ಅಮ್ಮಾ ಊರ ಪೊಱಗಣ ಬಾವಿಯೊಳೊರ್ವ್ವಂ ಮಹಾಪುರುಷಂ ಬಂದಿರ್ದ್ದೊನಾತನಂ ನೀಮೊಡಗೊಂಡು ಮನೆಗೆ ಬನ್ನಿಮೆಂದೊಡಂತೆ ಗೆಯ್ವೆನೆಂದಾತನುಂ ಪೋಗಿಯೊಡಗೊಂಡು ಬಂದಾತನಶ್ರಮಂ ಪೋಗೆ ದಿವ್ಯಮಪ್ಪಾಹಾರಮನೂಡಿರ್ದ್ದನ್.

CAREERINDIA

ಅನ್ನೆಗಮರಸನಡಿವಜ್ಜೆಯಂ ನೋಡುತ್ತಂ ಪೆಱಗಣಿಂದಂ ತಂತ್ರಮೆಲ್ಲಂ ಬಂದರಸನಿಲ್ಲಿಗೆ ವಂದೊನೆಯೆಂದು ಊರೊಳಗೆಲ್ಲಮಱಸಿ ಬೆಸಗೊಂಡವರ ರಸನಂ ಕಂಡೆಱಗಿ ಪೊಡೆವಡುವುದುಮಂ ಜೀಯ ಮಹಾಪ್ರಸಾದವೆಂಬುದುಮಂ ಗಾವುಂಡಂ ಕಂಡು ಎಲೆ ಈತನರಸನೆಂದಱೆದಗ್ಗಳಂ ಪ್ರತಿಪತ್ತಿಯುಂ ಗೌರವಮುಮಂ ಮಾಡಿದೊಡರಸಂ ತನ್ನ ಪೆರ್ಗ್ಗಡೆಗಳಿಂದಂ ಕೂಸಂ ಬೇಡಿ ಪೆತ್ತು ಮದುವೆನಿಂದಾಕೆಗೆ ಮಹಾದೇವಿವಟ್ಟಂಗಟ್ಟಿ ತನ್ನ ಪೊಟಿಲ್ಗೆ ಪೋಗಿ ಕರುವಾಡಮಂ ಬಳಸಿಯುಮಿರ್ದ್ದಂತಃಪುರದೊಳಗೊಂದೊಳ್ಳಿತಪ್ಪ ಮಾಡಮಂ ಕೊಟ್ಟಿರಿಸಿ ಎಲ್ಲಾ ಅರಸಿಯರ್ಕ್ಕಳುಮನುೞಿದು ಜಿನದತ್ತೆಗಾಸಕ್ತನಾಗಿ ಪಲಕಾಲಮಾಕೆಯೊಳಿಷ್ಟ ವಿಷಯ ಕಾಮಭೋಗಂಗಳನನುಭವಿಸುತ್ತಿರ್ಪ್ಪನ್ನೆಗ ಮೊಂದು ದಿವಸಂ ಅಡವಿಯ ಸೊರ್ಕ್ಕಿದಾನೆ ಗಣಿಯಾನೆಗಳ್ ವೆರಸು ಬಂದು ಬಾವಿಯಂ ಪೊಕ್ಕೊಡೆ ಪಿರಿದುಂ ಕಳಕಳಮಾಗಿ ಅರಸಂಗಱಪಿದೊಡರಸನುಂ ಕೇಳ್ದು ತುರಿಪದಿಂ ಪೊಱಮಟ್ಟು ಕಾಡಾನೆಯಂ ಕಟ್ಟಿಸಲೆಂದು ಬಾವಿಗೆ ಪೋದನಾ ಪ್ರಸ್ತಾವದೊಳ್ ಜಿನದತ್ತೆ ಪಸದನಂಗೊಂಡಿರ್ದ್ದಾಕೆ ಎನ್ನಂ ಬಿಸುಟ್ಟ ರಸಂ ಪೋದನೆಂದು ಮುಳಿದು ನುಡಿವುದುಂ ಅರಸನಾಕೆಯನೊಡಗೊಂಡು ಪೋಗದುದಂ ಕಂಡರಸಿಯರ್ಕ್ಕಳೆಲ್ಲಂ ಸಂತೋಸಮಾಗಿ ಇನ್ನೆಮಗಮರಸಂ ಸೂಱುಂ ಪಾೞೆಯುಮನೀಗುಮೆಂದು ರಾಗಿಸಿ ನುಡಿವ ಮಾತುಗಳಂ ಜಿನದತ್ತೆ ಕೇಳ್ದು ಕಿನಿಸಿ ಇನ್ನಾತನೆನಗೆ ಬಾೞ್ತೆಯಲ್ಲನೆಂದು ತನ್ನ ಮಾಡದಿಂ ಪೊಱಮಟ್ಟು ಪೆಱತೊಂದು ಪ್ರಾಸಾದದೊಳ್ ಪೋಗಿರ್ದ್ದೊಳ್.

ಅನ್ನೆಗಮಿತ್ತ ಅರಸನಾನೆಯಂ ಕಟ್ಟಿಸಿ ಜಿನದತ್ತೆಯ ವಾಡಕ್ಕೆ ಪೋಗಿಯರಸಿಯಂ ಕಾಣದೆಲ್ಲಿರ್ದ್ದಳೆಂದು ಬೆಸಗೊಂಡೊಡೋರ್ವ್ವನಿಂತೆಂದಂ ನೀಮೊಡಗೊಂಡು ಪೋದಿರಿಲ್ಲೆಂದರಸಿ ಮುಳಿದು ಪುರುಷವ್ರತಮಂ ಕೊಂಡು ತಪಸ್ವಿನಿಯಾಗಿ ಪೆಱತೊಂದು ಮಾಡದೊಳಿರ್ದ್ದೊಳೆಂದು ಪೇೞ್ದೊಡಾ ಮಾತನರಸಂ ಕೇಳ್ದಾದಮಾನುಂ ಮುಳಿದಿಂತಪ್ಪ ವ್ರತಮಂ ತಪಮುಮೆನ್ನಲ್ಲಿ ಕೂಡದೆಂದು ನುಡಿದಾಕೆಯಂ ಬೆಳ್ಕಾಡೊಳ್ ಮಸಣದೊಳ್ ಕೊಂಡು ಪೋಗಿಕ್ಕಿಮೆಂದಾಳ್ಗಳ್ಗೆ ಬೆಸನಂ ಪೇೞ್ದೊಡವರುಮಂತೆ ಗೆಯ್ವೆಮೆಂದರಸಿಯ ನೊಡಗೊಂಡು ಪೋಗಿ ಮಸಣದೊಳೊಂಬತ್ತು ತಿಂಗಳ ಗರ್ಭಿಣಿಯಂ ಪೊತ್ತು ಪೋಗಿಯಾಕೆಯನಲ್ಲಿಕ್ಕಿ ಇಂತೆಂದರ್ ಅಬ್ಬಾ ಎಮಗೇನುಂ ದೋಷಮುಂ ಪಾಪಮುಮಿಲ್ಲ ಕ್ಷಮಿಯಿಸಿಮರಸನ ಬೆಸದೊಳ್ ತಂದಿಕ್ಕಿದೆಮೆಂದು ನುಡಿದು ಪೋಪರನ್ನೆಗಮಾ ಇರುಳೊಳರಸಿ ಬೆಸಲೆಯಾಗಿ ಮಗನಂ ಪೆತ್ತಳ್.

**31.** ಪ್ರದ್ಯೋತನು ಕಾಡಿಗೆ ಹೋದುದು :

(1) ಕಾಡಾನೆಯನ್ನು ಹಿಡಿಯಲು

(2) ಬೇಟೆಯನ್ನು ಆಡಲು

(3) ವನವಿಹಾರ ಮಾಡಲು

(4) ಸುಖಭೋಗಗಳನ್ನು ಅನುಭವಿಸಲು

**32.** ಪ್ರದ್ಯೋತನು ತನ್ನ ಪಟ್ಟಣಕ್ಕೆ ಮರಳಲು ಅಸಾಧ್ಯವಾದುದು :

(1) ಏರಿದ ಆನೆ ತಪ್ಪಿಸಿಕೊಂಡಿದ್ದರಿಂದ

(2) ಏರಿದ ಆನೆ ದಾರಿ ತಪ್ಪಿದ್ದರಿಂದ

(3) ಏರಿದ ಆನೆ ಮದವೇರಿ ದಿಕ್ಕೆಟ್ಟು ಓಡಿದ್ದರಿಂದ

(4) ಏರಿದ ಆನೆ ಬಿಟ್ಟು ಹೋದದ್ದರಿಂದ

**33.** ಜಿನದತ್ತೆಯು ಪ್ರದ್ಯೋತನನ್ನು ಭೇಟಿಯಾದದ್ದು :

(1) ಬಾವಿಯ ಬಳಿಯಲ್ಲಿ ಸುಳಿದಾಡುತ್ತಿದ್ದಾಗ

(2) ಹಸಿವಿನಿಂದ ತೊಳಲಾಡುತ್ತಿದ್ದಾಗ

(3) ತನ್ನ ಮನೆಯಿಂದ ಬೇರೊಂದು ಅರಮನೆಗೆ ಹೋದಾಗ

(4) ನೀರು ತರಲೆಂದು ಭಾವಿಗೆ ಹೋದಾಗ

www.careerindia.com

CAREERINDIA

34. ಜಿನದತ್ತೆಯು ಅರಮನೆಯನ್ನು ಬಿಟ್ಟು ಹೋದುದು :

(1) ಆನೆಗಳನ್ನು ನೋಡಲು (2) ಬೇಸರ ಕಳೆಯಲು

(3) ಅರಸನನ್ನು ಹುಡುಕಲು (4) ತಪಸ್ಸು ಮಾಡಲು

35. ಜಿನದತ್ತೆಯನ್ನು ಆಳುಗಳು ಕೊಂಡೊಯ್ದು ಬಿಟ್ಟುದು :

(1) ಕಾಡಿನಲ್ಲಿ (2) ಅರಮನೆಯಲ್ಲಿ (3) ಸ್ಮಶಾನದಲ್ಲಿ (4) ಪಟ್ಟಣದಲ್ಲಿ

**ಹೇಳಿಕೆ – ವಿವರಣೆ ಆಧಾರಿತ ಬಹು ಆಯ್ಕೆಯ ಮಾದರಿ :**

36. **ಹೇಳಿಕೆ :** 'ನಿಸ್ಸಾರಮಪ್ಪ ಭೋಗದೊಳ್ ಸಿಲ್ಕಿ, ಅಮೇಧ್ಯದೊಳ್ ಕ್ರೀಡಿಸುವ ಬಾಳಕಂಬೊಲ್ ಕಾಲಮಂ ಬರಿದೆ ಕಳೆದೆಂ'.

**ವಿವರಣೆ :** 'ನಿಸ್ಸಾರವಾದ ಭೋಗದಲ್ಲಿ ಮುಳುಗಿ, ಸ್ವರ್ಗದಲ್ಲಿ ಆಟವಾಡುವ ಬಾಳೆಕಂಬದಂತೆ ಕಾಲವನ್ನು ಕಳೆದೆ'.

(1) ಹೇಳಿಕೆ ಸರಿ, ವಿವರಣೆ ತಪ್ಪು (2) ಹೇಳಿಕೆ ತಪ್ಪು, ವಿವರಣೆ ತಪ್ಪು

(3) ಹೇಳಿಕೆ ಸರಿ, ವಿವರಣೆ ಸರಿ (4) ಹೇಳಿಕೆ ತಪ್ಪು, ವಿವರಣೆ ಸರಿ

37. **ಹೇಳಿಕೆ :** ಹೊಟ್ಟೆಯ ಮೇಲೆ ಕಟ್ಟೋಗರದ ಮೊಟ್ಟೆಯ ಕಟ್ಟಿದರೇನು ? ಹಸಿವು ಹೋಹುದೇ ?

**ವಿವರಣೆ :** ಹೊಟ್ಟೆಯ ಹೊರಭಾಗದಲ್ಲಿ ಅನ್ನದ ಗಂಟನ್ನು ಕಟ್ಟಿಕೊಂಡರೆ ಹಸಿವು ನಿವಾರಣೆಯಾಗುವುದಿಲ್ಲವಲ್ಲವೇ ?

(1) ಹೇಳಿಕೆ ಸರಿ, ವಿವರಣೆ ತಪ್ಪು (2) ಹೇಳಿಕೆ ತಪ್ಪು, ವಿವರಣೆ ಸರಿ

(3) ಹೇಳಿಕೆ ಸರಿ, ವಿವರಣೆ ಸರಿ (4) ಹೇಳಿಕೆ ತಪ್ಪು, ವಿವರಣೆ ತಪ್ಪು

38. **ಹೇಳಿಕೆ :** ರೀತಿ ವಿನೂತ ವಸ್ತು ಕೃತಿಗೊಪ್ಪುವ ಮೆಯ್ ರಸಭಾವ ವೃತ್ತಿ ನಿರ್ಣೀತಿಯೆ ಜೀವಂ.

**ವಿವರಣೆ :** ಕವಿಯ ಕೃತಿಗಳಿಗೆ ವಸ್ತುಗಳೇ ಜೀವ, ರಸಭಾವಗಳೇ ದೇಹ ಎಂದು ಹೇಳುವುದೇ ರೀತಿ.

(1) ಹೇಳಿಕೆ ತಪ್ಪು, ವಿವರಣೆ ಸರಿ (2) ಹೇಳಿಕೆ ತಪ್ಪು, ವಿವರಣೆ ತಪ್ಪು

(3) ಹೇಳಿಕೆ ಸರಿ, ವಿವರಣೆ ಸರಿ (4) ಹೇಳಿಕೆ ಸರಿ, ವಿವರಣೆ ತಪ್ಪು

39. **ಹೇಳಿಕೆ :** ಬೆಂಕಿ ಹಚ್ಚಿದಿ, ಬೇಲ್ಯಾಗ ನಿಂತಿ.
ಸಿದ್ಧ ಪ್ರಸಿದ್ಧರ ಗುದ್ದ ಹೊಗಿಸಿದಿ.

**ವಿವರಣೆ :** ಬೇರೆಯವರನ್ನು ನಾಶಮಾಡುವ ಕೆಲಸ ಮಾಡಿ, ನೀನು ಮಾತ್ರ ಮರೆಯಲ್ಲಿ ಇದ್ದೆ, ಅನೇಕ ಪ್ರಸಿದ್ಧರಾದಂಥವರಿಗೆ ಸಿಂಹಾಸನ ಏರುವಂತೆ ಮಾಡಿದೆ.

(1) ಹೇಳಿಕೆ ಸರಿ, ವಿವರಣೆ ಸರಿ (2) ಹೇಳಿಕೆ ಸರಿ, ವಿವರಣೆ ತಪ್ಪು

(3) ಹೇಳಿಕೆ ತಪ್ಪು, ವಿವರಣೆ ತಪ್ಪು (4) ಹೇಳಿಕೆ ತಪ್ಪು, ವಿವರಣೆ ಸರಿ

www.careerindia.com

CAREERINDIA

**40.** ಈ ಕೆಳಗಿನ ಜೋಡಿಗಳಲ್ಲಿ ಯಾವುದು ಸರಿ ಹೊಂದಿಕೆಯಾಗುವುದಿಲ್ಲ ?

(1) ರುದ್ರಭಟ್ಟ – ಜಗನ್ನಾಥ ವಿಜಯ (2) ನೇಮಿಚಂದ್ರ – ಲೀಲಾವತಿ ಪ್ರಬಂಧಂ

(3) ಲಕ್ಕಣ್ಣ ದಂಡೇಶ – ಶರಭ ಚಾರಿತ್ರ (4) ಚಾಟು ವಿಠಲನಾಥ – ಕನ್ನಡ ಭಾಗವತ

**41.** ಈ ಕೆಳಗಿನ ಜೋಡಿಗಳಲ್ಲಿ ಯಾವುದು ಸರಿ ಹೊಂದಿಕೆಯಾಗುತ್ತದೆ ?

(1) ಸಿದ್ಧರಾಮ – ಕಾಲಜ್ಞಾನ

(2) ತಿರುಮಲಾರ್ಯ – ತ್ರಿಲೋಕಶತಕ

(3) ರತ್ನಾಕರವರ್ಣಿ – ಚಿಕ್ಕದೇವರಾಜ ವಿಜಯ

(4) ಜನ್ನ – ಪಾರ್ಶ್ವನಾಥ ಪುರಾಣ

**42.** ಈ ಕೆಳಗಿನ ಜೋಡಿಗಳಲ್ಲಿ ಯಾವುದು ಸರಿ ಹೊಂದಿಕೆಯಾಗುವುದಿಲ್ಲ ?

(1) ಯಶವಂತ ಚಿತ್ತಾಲ – ಛೇದ (2) ಬಸವರಾಜ ಕಟ್ಟೀಮನಿ – ಸ್ವಾತಂತ್ರ್ಯದೆಡೆಗೆ

(3) ಎಸ್.ಎಲ್. ಭೈರಪ್ಪ – ಸಾಕ್ಷಿ (4) ವಿ.ಕೃ. ಗೋಕಾಕ್ – ಮೂರಾಬಟ್ಟೆ

**43.** ಈ ಕೆಳಗಿನ ಜೋಡಿಗಳಲ್ಲಿ ಯಾವುದು ಸರಿ ಹೊಂದಿಕೆಯಾಗುತ್ತದೆ ?

(1) ಸಿ.ಡಿ. ಲೂಯಿ – ವಸ್ತು ಪ್ರತಿರೂಪ (2) ಕ್ರೋಚೆ – ಇಂಟ್ಯೂಶನ್

(3) ಕೋಲ್‌ರಿಜ್ – ಕಾವ್ಯಪ್ರತಿಮೆ (4) ಇಲಿಯಟ್ – ಪ್ರತಿಭೆ

**44.** ಈ ಕೆಳಗಿನ ಜೋಡಿಗಳಲ್ಲಿ ಯಾವುದು ಸರಿ ಹೊಂದಿಕೆಯಾಗುವುದಿಲ್ಲ ?

(1) ಟಾಲ್‌ಸ್ಟಾಯ್ – ರಿಸರಕ್ಷನ್ (2) ಸಾಫೋಕ್ಲಿಸ್ – ಎಲೆಕ್ಟ್ರ

(3) ಕಾಫ್ಕ – ಔಟ್‌ಸೈಡರ್ (4) ಬ್ರೆಕ್ಟ್ – ದಿ ತ್ರಿ ಪೆನ್ನಿ ಅಪೇರಾ

**45.** ಇವುಗಳಲ್ಲಿ ಯಾವುದು ಹೊಂದಾಣಿಕೆಯಾಗುತ್ತದೆ ?

(1) ರೀತಿ – ಪದರಚನಾ ವಿಶೇಷ (2) ಅಭಿದಾ – ವ್ಯಂಗ್ಯಾರ್ಥ

(3) ಲಕ್ಷಣಾ – ವಾಚ್ಯಾರ್ಥ (4) ಶ್ಲೇಷ – ಕಾವ್ಯದೋಷ

www.careerindia.com

CAREERINDIA

**ಬಹು ಆಯ್ಕೆಯ ಜೋಡಣೆ :**

46. (a) ಬೆಸಗರ ಹಳ್ಳಿ ರಾಮಣ್ಣ — (i) ರಾಣಿಯ ಮದುವೆ
(b) ಶ್ರೀಕೃಷ್ಣ ಆಲನಹಳ್ಳಿ — (ii) ಆಟ
(c) ಮಾಸ್ತಿ ವೆಂಕಟೇಶ ಅಯ್ಯಂಗಾರ್ — (iii) ಗರ್ಜನೆ
(d) ವಾಣಿ — (iv) ಕಲ್ಮಾಡಿಯ ಕೋಣ
(v) ತಪ್ತ

**ಇವುಗಳಿಗೆ ಸರಿಯಾದ ಉತ್ತರ :**

| | (a) | (b) | (c) | (d) |
|---|---|---|---|---|
| (1) | (iii) | (v) | (iv) | (i) |
| (2) | (iii) | (iv) | (v) | (i) |
| (3) | (i) | (iv) | (iii) | (v) |
| (4) | (ii) | (i) | (iii) | (iv) |

47. (a) ಶೋಕ — (i) ವೀರ
(b) ಉತ್ಸಾಹ — (ii) ಅದ್ಭುತ
(c) ವಿಸ್ಮಯ — (iii) ಕರುಣ
(d) ರತಿ — (iv) ಕಾಮ
(v) ಶೃಂಗಾರ

**ಇವುಗಳಿಗೆ ಸರಿಯಾದ ಉತ್ತರ :**

| | (a) | (b) | (c) | (d) |
|---|---|---|---|---|
| (1) | (iii) | (i) | (iv) | (v) |
| (2) | (i) | (iii) | (iv) | (v) |
| (3) | (iii) | (ii) | (iv) | (i) |
| (4) | (iii) | (i) | (ii) | (v) |

48. (a) ದೇಶ್ಯ ಶಬ್ದಗಳು — (i) ಅಸಡ್ಡೆ, ದಾಡೆ
(b) ಅನ್ಯ ದೇಶ್ಯಗಳು — (ii) ಬೆಣ್ಣೆ, ಗುಲಾಬಿ
(c) ಸಂಸ್ಕೃತ — (iii) ನಾಜೂಕು, ಗಲೀಜು
(d) ತದ್ಭವ — (iv) ನೇಸರು, ತಿಂಗಳು
(v) ಸ್ನೇಹ, ಮಲಿನ

**ಇವುಗಳಿಗೆ ಸರಿಯಾದ ಉತ್ತರ :**

| | (a) | (b) | (c) | (d) |
|---|---|---|---|---|
| (1) | (iv) | (iii) | (i) | (v) |
| (2) | (iv) | (iii) | (v) | (i) |
| (3) | (ii) | (iii) | (iv) | (i) |
| (4) | (v) | (iii) | (iv) | (i) |

www.careerindia.com

CAREERINDIA

**ಅನುಕ್ರಮ ಮಾದರಿ : ಈ ಕೆಳಗಿನವುಗಳಲ್ಲಿ ಸರಿಯಾದ ಕಾಲಾನುಕ್ರಮಣಿಕೆಯನ್ನು ಗುರುತಿಸಿರಿ.**

**49.** (1) ಮಲ್ಲಿನಾಥಪುರಾಣ, ಕರ್ಣಾಟಕ ಪಂಚತಂತ್ರ, ಸಾಹಸಭೀಮ ವಿಜಯ, ಶಾಂತಿಪುರಾಣ
(2) ಸಾಹಸಭೀಮ ವಿಜಯ, ಶಾಂತಿಪುರಾಣ, ಮಲ್ಲಿನಾಥಪುರಾಣ, ಕರ್ಣಾಟಕ ಪಂಚತಂತ್ರ
(3) ಶಾಂತಿಪುರಾಣ, ಸಾಹಸಭೀಮ ವಿಜಯ, ಕರ್ಣಾಟಕ ಪಂಚತಂತ್ರ, ಮಲ್ಲಿನಾಥಪುರಾಣ
(4) ಕರ್ಣಾಟಕ ಪಂಚತಂತ್ರ, ಶಾಂತಿಪುರಾಣ, ಮಲ್ಲಿನಾಥಪುರಾಣ, ಸಾಹಸಭೀಮ ವಿಜಯ

**50.** (1) ಆಂಗ್ಲ ಕವಿತಾವಳಿ, ಇಂಗ್ಲಿಷ್ ಗೀತೆಗಳು, ಕನ್ನಡ ಕೈಪಿಡಿ, ಭಾಷಾ ವಿಜ್ಞಾನದ ಮೂಲತತ್ವಗಳು
(2) ಕನ್ನಡ ಕೈಪಿಡಿ, ಆಂಗ್ಲ ಕವಿತಾವಳಿ, ಇಂಗ್ಲಿಷ್ ಗೀತೆಗಳು, ಭಾಷಾ ವಿಜ್ಞಾನದ ಮೂಲತತ್ವಗಳು
(3) ಇಂಗ್ಲಿಷ್ ಗೀತೆಗಳು, ಆಂಗ್ಲ ಕವಿತಾವಳಿ, ಕನ್ನಡ ಕೈಪಿಡಿ, ಭಾಷಾ ವಿಜ್ಞಾನದ ಮೂಲತತ್ವಗಳು
(4) ಆಂಗ್ಲ ಕವಿತಾವಳಿ, ಕನ್ನಡ ಕೈಪಿಡಿ, ಭಾಷಾ ವಿಜ್ಞಾನದ ಮೂಲತತ್ವಗಳು, ಇಂಗ್ಲಿಷ್ ಗೀತೆಗಳು

**- o O o -**

www.careerindia.com

**Space For Rough Work**

www.careerindia.com